**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ:ಡಿಟಿಇ/09/ಸಿಡಿಸಿ(1)/2022

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560001,
ದಿನಾಂಕ: 09/06/2022.

**ಜ್ಞಾಪನ**

ವಿಷಯ: ರಾಜ್ಯದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ NBA ಮಾನ್ಯತೆ ಪಡೆಯುವ ಸಲುವಾಗಿ ಆಯುಕ್ತಾಲಯದ ಮಟ್ಟದಲ್ಲಿ ಸಂಯೋಜಕರಾಗಿ ನೇಮಿಸುವ ಬಗ್ಗೆ.

ಉಲ್ಲೇಖ: ಈ ಕಚೇರಿ ಜ್ಞಾಪನ ಸಂ: ತಾಂ.ಶಿ.ಇ 03 ಸಿಡಿಸಿ(1) 2019-20 ದಿ:21/04/2022.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಎಲ್ಲಾ ಪ್ರೋಗ್ರಾಂಗಳಿಗೆ ಸಂಬಂಧಿಸಿದಂತೆ, Pre qualifier ನ್ನು dtenbaengg@gmail.com ಗೆ ಸಲ್ಲಿಸಲು ಸೂಚಿಸಲಾಗಿತ್ತು. ಈ ಹಿನ್ನಲೆಯಲ್ಲಿ NBA ಚಟುವಟಿಕೆಗಳನ್ನು ತೀವ್ರಗೊಳಿಸುವ ಸಲುವಾಗಿ ಆಯುಕ್ತಾಲಯದ ಮಟ್ಟದಲ್ಲಿ ಈ ಕೆಳಕಂಡ ಪ್ರಾಧ್ಯಾಪಕರು / ಸಹಾಯಕ ಪ್ರಾಧ್ಯಾಪಕರುಗಳನ್ನು NBA ಸಂಯೋಜಕರಾಗಿ ನೇಮಿಸಲಾಗಿದೆ.

1. ಡಾ.ಬಸವರಾಜ್ TG- ಪ್ರಾಧ್ಯಾಪಕರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ ಸಂಯೋಜಕರು.
2. ಡಾ.ಜಗದೀಶ್ ಕೋರಿ- ಪ್ರಾಧ್ಯಾಪಕರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ ಸಹಾಯಕ ಸಂಯೋಜಕರು.
3. ಡಾ.ಗುರುಪ್ರಸಾದ್ ಹೂಗಾರ್- ಸಹಾಯಕ ಪ್ರಾಧ್ಯಾಪಕರು, ತಾಂಶಿ.ಇ-ಬೆಂಗಳೂರು. ಸಹಾಯಕ ಸಂಯೋಜಕರು.

ಮೇಲ್ಕಂಡ ಸಂಯೋಜಕರು ಮತ್ತು ಸಹಾಯಕ ಸಂಯೋಜಕರು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಸಲ್ಲಿಸಿದ Prequalifier ನ್ನು ಪರಿಶೀಲಿಸಲು ಹಾಗೂ ಅರ್ಹತೆ ಪಡೆದ ಪ್ರೋಗ್ರಾಂಗಳನ್ನು NBA ಮಾನ್ಯತೆ ಪಡೆಯುವ ಸಲುವಾಗಿ ಮಾರ್ಗದರ್ಶನವನ್ನು ಮತ್ತು ಸೂಕ್ತ ಕ್ರಮಗಳನ್ನುಆನ್ ಲೈನ್ ಮುಖಾಂತರ ನಡೆಸಲು ತಿಳಿಸಿದೆ.

ಸದರಿ ವಿಷಯದಲ್ಲಿ ಇಲ್ಲಿಯವರೆಗೆ ಆಗಿರುವ ಪ್ರಗತಿಯ ಬಗ್ಗೆ ಸಂಸ್ಥೆಗಳ ಪ್ರಾಚಾರ್ಯರುಗಳಿಂದ ವರದಿ ಪಡೆದು, ಕ್ರೋಢೀಕೃತ ವರದಿಯನ್ನು ದಿ:20/06/2022ರ ಒಳಗಾಗಿ ಜಂಟಿ ನಿರ್ದೇಶಕರು(ಸಿಡಿಸಿ), ತಾಂ.ಶಿ.ಇ ಇವರಿಗೆ ಸಲ್ಲಿಸಲು ಸೂಚಿಸಿದೆ.

ಜಂಟಿ ನಿರ್ದೇಶಕರು-ಸಿಡಿಸಿ

ಇವರಿಗೆ: ಮೇಲ್ಕಂಡ ಎಲ್ಲಾ ಸಂಯೋಜಕರುಗಳಿಗೆ-ಸೂಕ್ತ ಕ್ರಮಕ್ಕಾಗಿ. (ಪ್ರಾಚಾರ್ಯರ ಮುಖಾಂತರ).

ಪ್ರತಿ:
1. ರಾಜ್ಯದ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ- ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಮಾನ್ಯ ಆಯುಕ್ತರ ಆಪ್ತ ಶಾಖೆ- ಮಾಹಿತಿಗಾಗಿ.
3. ಮಾನ್ಯ ನಿರ್ದೇಶಕರ ಆಪ್ತ ಶಾಖೆ- ಮಾಹಿತಿಗಾಗಿ.
4. ಇ-ಗೌವರ್ನೆನ್ಸ್ ವಿಭಾಗ- ಇಲಾಖಾ ಅಂತರ್ ಜಾಲದಲ್ಲಿ ಪ್ರಚುರಪಡಿಸಲು.